Date : 12/08/2022

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಜಿ.ಎಂ.ಜೆ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ .

ಅರ್ಜಿಗೆ ಪೂರಕವಾಗಿ ಸರ್ವೆ ನಂ.7/157 ರ ಪಹಣಿ ಪತ್ರಿಕೆ, ಮೃತ ತಿರುಮಲಭೋವಿ ಇವರ ಮರಣ ಪ್ರಮಾಣ ಪತ್ರದ ನಿಜ ಪ್ರತಿ, ತಿರುಮಲಭೋವಿ ಬಿನ್ ಶೆಟ್ಟಪ್ಪ ರವರು ಅರ್ಜಿ ಆಸ್ತಿಯ ಬಗ್ಗೆ ಮಾಡಿಕೊಟ್ಟಿರುವ ಮೂಲ ಮರಣ ಶಾಸನ ಪತ್ರ, ನನ್ನ ಆಧಾರ್ ಕಾರ್ಡ್ ನ ದೃಢೀಕೃತ ನಿಜ ಪ್ರತಿ (ಮೂಲ ಆಧಾರ್ ಕಾರ್ಡ್ ಅನ್ನು ಪರಿಶೀಲಿಸಿ ವಾಪಾಸು ನೀಡಲಾಗಿರುತ್ತದೆ), ಅರ್ಜಿಯ ಬಗ್ಗೆ ಹೊರಡಿಸಲಾದ ವಿಜಯ ಕರ್ನಾಟಕ ಪ್ರಕಟಣೆ ದಿನಪತ್ರಿಕೆ ಹಾಜರುಪಡಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 5 ಎಂದು ಗುರುತಿಸಲಾಯಿತು.

*ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.*

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

ದಿನಾಂಕ 14/12/2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಶ್ರೀ ಜಿ.ಎಂ.ಜೆ. ವಕೀಲರಿಂದ –**

ಈಗಾಗಲೇ ನನ್ನ ಸಂಪೂರ್ಣ ಮುಖ್ಯ ಸಾಕ್ಷ್ಯವನ್ನು ನೀಡಿದ್ದು ಯಾವುದೇ ಹೆಚ್ಚುವರಿ ಸಾಕ್ಷ್ಯ ಇರುವುದಿಲ್ಲ.

***ಎದುರುದಾರರು ಯಾರೂ ಇಲ್ಲವಾದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.